# 'ವಾಸ್ತವೀಕತೆ' ನಾಟಕದಲ್ಲಿ ಶಿಕ್ಷಣದ ಸ್ವರೂಪ

## Nature of Education in 'Realism' Drama

ಶೋಭಾ ಎನ್
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ,
ಸ.ಪ.ದ.ಕಾಲೇಜು, ಯಲಹಂಕ ಬೆಂಗಳೂರು ೬೪

ಮೂರು ದಶಕಗಳ ಕಾಲ ಸತತವಾಗಿ ಪ್ರಾಧ್ಯಾಪಕಿಯಾಗಿ ಹಾಗೂ ನ್ಯಾಷನಲ್ ಕಾಲೇಜಿನ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಗೀತಾರಾಮಾನುಜಂ ಶೈಕ್ಷಣಿಕ ಕ್ಷೇತ್ರದಲ್ಲಿ ಚಿರಪರಿಚಿತರು. ಇವರು ಸಮರ್ಥ ಆಡಳಿತಾಧಿಕಾರಿ, ಪ್ರಸಿದ್ಧ ನಾಟಕ ರಚನಕಾರರು ಮತ್ತು ನಿರ್ದೇಶಕರು, ಶಿಕ್ಷಣ ತಜ್ಞೆಯಾದ ಇವರು ಸ್ವ-ಅನುಭವದ ಮೂಲಕ ಇಂದಿನ ಶಿಕ್ಷಣ ಪದ್ಧತಿ, ಪೋಷಕರ ಆಕಾಂಕ್ಷೆ, ವಿದ್ಯಾರ್ಥಿಗಳ ಮನಸ್ಥಿತಿಯನ್ನು ಹತ್ತಿರದಿಂದ ಕಂಡವರು, ಶಿಕ್ಷಣ ಎತ್ತಸಾಗುತ್ತಿದೆ ? ಮಕ್ಕಳ ಸೃಜನ ಶೀಲ ಮನಸ್ಸು ಪೋಷಕರ ನಿರ್ಬಂಧದ ಸುಳಿಯಲ್ಲಿ ಮುರುಟಿ ಹೋಗುವ ದುರಂತವನ್ನು ಸೈದ್ಧಾಂತಿಕವಾಗಿ ವಾಸ್ತವಿಕತೆ ನಾಟಕದಲ್ಲಿ ಚಿತ್ರಿಸಿದ್ದಾರೆ. ಆ ಮೂಲಕ 'ಶಿಕ್ಷಣ' ವನ್ನು ಮರು ವ್ಯಾಖ್ಯಾನಕ್ಕೆ ಒಳಪಡಿಸುವ ಅವಶ್ಯಕತೆಯನ್ನು ಒತ್ತಿ ಹೇಳಿದ್ದಾರೆ.

`ವಾಸ್ತವೀಕತೆ` ಐದು ದೃಶ್ಯಗಳ ಕಿರು ನಾಟಕ. ರಾಮಪ್ಪ, ಲಕ್ಷ್ಮೀ, ಶೀತಲ್, ಶ್ರೀನಿವಾಸ್, ರವಿ ಇಲ್ಲಿ ಬರುವ ಪ್ರಮುಖ ಪಾತ್ರಗಳು. ಈ ಪಾತ್ರಗಳ ಮೂಲಕ 'ಶಿಕ್ಷಣ' ವನ್ನು ಸಮಾಜ ಗ್ರಹಿಸುತ್ತಿರುವ ವಿಭಿನ್ನ ನೆಲೆಗಳನ್ನು ನಾಟಕಕಾರ್ತಿ ವಿಶ್ಲೇಷಿಸಿದ್ದಾರೆ. ಇಲ್ಲಿ ಚರ್ಚಿಸಲ್ಪಡುವ ಅಂಶಗಳೆಂದರೆ

- ಸಾಹಿತ್ಯ, ಸಂಗೀತ, ನಾಟಕದಂತಹ ಕಲೆಗಳು ಶಿಕ್ಷಣವಲ್ಲವೇ?
- ಕೇವಲ ಸೈನ್ಸ್ ಮಾತ್ರ ಬದುಕನ್ನು ಕಟ್ಟಿಕೊಡುವ ಪದವಿಯೇ?
- ಶಿಕ್ಷಣ ಸಾಮಾಜಿಕ ಸ್ಥಾನಮಾನ - ಪ್ರತಿಷ್ಠೆಯನ್ನು ಎತ್ತರಿಸುವ ವಾಹಕವೇ ?
- ಮಕ್ಕಳ ಮೇಲೆ ಪೋಷಕರ ಒತ್ತಡದ ಪರಿಣಾಮ.

ಮಕ್ಕಳ ಕಲಿಕೆಯ ಸಂದರ್ಭದಲ್ಲಿ ಪೋಷಕರ ವರ್ತನೆಯನ್ನು ವಿಡಂಬನೆ ಮಾಡುವ ಮೂಲಕ ಸಮಾಜಕ್ಕೆ ಚಾಟಿ ಬೀಸಿ ಎಚ್ಚರಿಸುವ ಪ್ರಯತ್ನ ಈ ನಾಟಕದಲ್ಲಿ ಕಂಡು ಬರುತ್ತದೆ.

ವಿಜ್ಞಾನಿಯಾದ ರಾಮಪ್ಪನ ಪ್ರಕಾರ ಶಿಕ್ಷಣ ಎಂದರೆ Future ಮತ್ತು Scope ಇರುವಂತದ್ದು. ತಮ್ಮ ಸಾಮಾಜಿಕ ಅಂತಸ್ತಿಗೆ ತಕ್ಕ ಕೋರ್ಸ್ ವಿನಾಃ ಆಸಕ್ತಿಗೆ ತಕ್ಕದ್ದಲ್ಲ ಎಂಬ ನಂಬಿಕೆಯುಳ್ಳವನ್ನು, ಹೀಗಾಗಿಯೇ ಮಗಳು ಶೀತಲ್ 'ಮೆಡಿಕಲ್ ಓದಲೇ ಬೇಕೆಂದು ಆಕೆಯನ್ನು 'ಸೈನ್ಸ್' ವಿಭಾಗಕ್ಕೆ ಸೇರಿಸುತ್ತಾನೆ. ಶೀತಲ್‌ಗೆ ಸಾಹಿತ್ಯ

ಸಂಗೀತದಲ್ಲಿ ತೀವ್ರವಾದ ಆಸಕ್ತಿ ಈ ಕಲೆಗಳ ಬಗ್ಗೆ ರಾಮಪ್ಪನಿಗೆ ದಿವ್ಯ ನಿರ್ಲಕ್ಷ್ಯ ಆತನಿಗೆ ಶೀತಲ್ ೨೪ ಗಂಟೆಯೂ ಸತತವಾಗಿ ಓದಿ ಬ್ಯಾಂಕ್ ಗಳಿಸಿ ತನ್ನ ಪ್ರತಿಷ್ಠೆಯನ್ನು ಮತ್ತಷ್ಟು ಹೆಚ್ಚಿಸಬೇಕು ಎಂಬ ಮಹತ್ವಾಕಾಂಕ್ಷೆ ಈ ಕಾರ್ಯಕ್ಕೆ ಆಕೆಯ ಶೈಕ್ಷಣಿಕ ಜೀವನವನ್ನೇ ಪ್ರಯೋಗಕೆ ಒಳಪಡಿಸುತ್ತಾನೆ. ಸಾಹಿತ್ಯ - ಸಂಗೀತ ಕಿವಿಗೆ ಬಿದ್ದರೆ ಸಿಡಿಮಿಡಿಗೊಳ್ಳುತ್ತಾನೆ.

"ಮಣ್ಣಾಂಗಟ್ಟಿ ನಮ್ಮ ವಿದ್ಯಾವಂತರ ಅಂತಸ್ತಿಗೆ ತಕ್ಕ ಹಾಗೆ ಡಾಕ್ಟರ್ ಆಗಕ್ಕೆ ಕಷ್ಟ ಪಡೋದ್ ಬಿಟ್ಟು ಅನಾವಶ್ಯಕವಾಗಿ ಕವನ, ಸಂಗೀತ, ಅಂತ ಟೈಂ ಎನರ್ಜಿ ಎಲ್ಲಾ ವೇಸ್ಟ್ ಮಾಡ್ತಾಳೆ" ಎಂದು ಕೂಗಾಡುತ್ತಾನೆ. ಒಂದು ಕ್ಷಣ ಸ್ನೇಹಿತರೊಂದಿಗೆ ಆಟವಾಡಿದರೂ

ನಿಮ್ಮ ತಂದೆ ಅಷ್ಟೇಗೆ ಆಟ ಆಡೋಕೆ ಬಿಟ್ಟಿದ್ದಾರೆ ನೀವು ಕಡುದಲ್ಲದೆ ಮಗಳನ್ನು ಕೆಡುಸ್ತೀರಾ" ಎಂದು ಮಗಳ ಸ್ನೇಹಿತರನ್ನೇ ದೂರುತ್ತಾನೆ.

ಶೀತಲ್ ತಾಯಿ 'ಲಕ್ಷ್ಮೀ' ಗೆ ಗಂಡನ ಈ ಮನಸ್ಥಿತಿಯ ಬಗ್ಗೆ ಅಸಹನೆ, ಗಂಡನ ಸಾಮಾಜಿಕ ಸ್ಥಾನಮಾನ, ಸಾಧನೆಯ ಬಗ್ಗೆ ಅಭಿಮಾನವಿದ್ದರ ಮಗಳ ಆಸಕ್ತಿಯನ್ನು ಪರೋಕ್ಷವಾಗಿ ಬೆಂಬಲಿಸುತ್ತಾಳೆ. ಆದರೆ, ರಾಮಪ್ಪನ ಒತ್ತಡ ತೀವ್ರವಾದಾಗ ಮಗಳಿಗೆ "ಕವಿತೆ ಬರೆಯೋದೆಲ್ಲಾ ನಿನ್ನ ವಿದ್ಯಾಭ್ಯಾಸ ಆದ ನಂತರ ಇನ್ನೊಮ್ಮ" ಎಂದಾಗ ಶೀತಲ್ "ಇದು ವಿದ್ಯಾಭ್ಯಾಸ ಯಾವುದನ್ನು ಆಸಕ್ತಿ ಇಟ್ಟು ಅಭ್ಯಾಸ ಮಾಡ್ತೀವೋ ಅದೇ ವಿದ್ಯೆ" ಅಲ್ಲವೇ ಎಂದು ಪ್ರಶ್ನಿಸುತ್ತಾಳ. ಶೀತಲ್ ಪ್ರಕಾರ ವಿದ್ಯೆ ಮಕ್ಕಳ ಆಸಕ್ತಿಯನ್ನು ವಿಕಾಸಗೊಳಿಸುವ ಅಂಶವೇ ವಿನಾಃ ಕುಟುಂಬದ ಪ್ರತಿಷ್ಟೆಯನ್ನು ಎತ್ತರಿಸುವ ಸಾಧನವಲ್ಲ. ಶೀತಲ್‌ಳ ವಾದ ಲಕ್ಷ್ಮೀಗೆ ಸರಿ ಎನಿಸಿದರೂ ಗಂಡನ ದರ್ಪದ ಮುಂದೆ ಸಮರ್ಥವಾದ ವಾದ ಮಂಡಿಸುವ ಧೈರ್ಯವಿಲ್ಲ. ಮಗಳ ಮೇಲೆ ತೀವ್ರ ಒತ್ತಡ ಹಾಕಿದಾಗ "ವಿಜ್ಞಾನದಲ್ಲಿ ಎಷ್ಟು ಸಂಶೋಧನೆ ಮಾಡಿದ್ರೆ ಏನು ಬಂತು ಮನಸ್ಸುಗಳನ್ನು ಅರಿಯೋ ಪ್ರಯೋಗ ಮಾಡಿದ್ದೇವೆ" ಎಂದು ಅಸಹನೆ ಗೊಳ್ಳುತ್ತಾಳೆ. ತಾಯಿಯಾದ ಲಕ್ಷ್ಮೀಗೆ ಮಗುವಿನ ಶಿಕ್ಷಣದ ಬಗ್ಗೆ ಇರುವ ವೈಜ್ಞಾನಿಕ ಅರಿವು ವಿಜ್ಞಾನಿಯಾದ ರಾಮಪ್ಪನಿಗೆ ಇಲ್ಲದಿರುವುದು ನಮ್ಮ ವ್ಯವಸ್ಥೆಯ ವಿಪರ್ಯಾಸವೇ ಸರಿ.

ಈ ಎಲ್ಲಾ ಒತ್ತಡಗಳ ಮಧ್ಯೆ ಶೀತಲ್ ಸೈನ್ಸ್' ಬಗ್ಗೆ ತೀವ್ರ ನಿರಾಸಕ್ತಿ ಮೂಡುತ್ತದೆ. ಸಾಹಿತ್ಯದ ಒಲವು ತೀವ್ರವಾಗುತ್ತದೆ. ಒಳ್ಳೆ ಕವಯಿತ್ರಿ ಆಗೋಕು, ಅಂತರಂಗದಿಂದ ಮೂಡಿದ ವಚನಗಳ ಹಾಗೆ, ಮೀರಾಬಾಯಿಯ ಕಂಠದಲ್ಲಿ ಕರಗಿದ ಭಜನ್‌ಗಳ ಹಾಗೆ ನನ್ನ ಲೇಖನಿಯಲ್ಲಿ ಮೂಡ ಬೇಕೆಂಬುದೇ" ಆಕೆಯ ಕನಸಾಗಿರುತ್ತದೆ. ಒತ್ತಡ – ಕನಸುಗಳ ಮಧ್ಯೆ ಓದಿದ ಶೀತಲ್ ದ್ವೀತಿಯ ದರ್ಜೆಯಲ್ಲಿ ಉತ್ತೀರ್ಣಳಾಗುತ್ತಾಳೆ. ಬ್ಯಾಂಕ್ ಬಂದರೆ ಮಾತ್ರ ಮಗಳು ಎಂಬ ಭ್ರಮೆಯಲ್ಲಿದ್ದ ರಾಮಪ್ಪನಿಗೆ ಆಘಾತವಾಗುತ್ತದೆ. ಸಮಾಜದ ಮುಂದೆ ಮಗಳು ಅತ್ಯಧಿಕ ಅಂಕ ಗಳಿಸಿದ್ದಾಳೆಂದು ನಾಟಕ ವಾಡುತ್ತಾನೆ. ಪ್ರತಿಷ್ಟೆಗಾಗಿ ಡೋನೇಷನ್ ಕೊಟ್ಟು ಮೆಡಿಕಲ್ ಓದಿಸಲು ಮುಂದಾಗುತ್ತಾನೆ. ಶೀತಲ್ "ಲಂಚ ಕೊಟ್ಟು ಓದು" ವುದಿಲ್ಲವೆಂದು ಪ್ರತಿಭಟಿಸುತ್ತಾಳೆ. ಲಕ್ಷ್ಮಿ ಕೂಡಾ "ನಮ್ಮ ಆಡಂಬರದ ಜೀವನಕ್ಕೆ ಅವಳನ್ನು ಯಾಕ್ರಿ ಬಲಿ ತೂಗೋತೀರಾ" ಎಂದು ಪ್ರಶ್ನಿಸುತ್ತಾಳೆ. `ಕತ-ಕವನದ ಬೀದೀಲಿ ಹೋಗೋರು ಬರೀತಾರೆ' ಎಂಬ ಭ್ರಮೆಯ ರಾಮಪ್ಪ ತನ್ನ ಹಠ ಬಿಡುವುದಿಲ್ಲ. ಮಗಳು ಪ್ರಾಣಕ್ಕೆ ಅನಾಹುತ ಮಾಡಿಕೊಂಡಾಳು ಎಂಬ ಭಯ ಅವರಿಸಿದಾಗ ಬದಲಾದಂತೆ ಕಂಡು ಬರುತ್ತದೆ.

ರಾಮಪ್ಪನಿಗಿಂತ ಭಿನ್ನವಾಗಿ ಆಲೋಚಿಸುವವನು ಶ್ರೀನಿವಾಸಯ್ಯ, ರಾಮಪ್ಪನ ಸ್ನೇಹಿತ ಯಾವುದೇ ಪ್ರತಿಷ್ಟೆಯ ಭ್ರಮೆಯಿಲ್ಲದ ಸಾಮಾನ್ಯ ವ್ಯಕ್ತಿ, ಈತನ ಮಗ ರವಿ ಶೀತಲ್‌ಳ ಸ್ನೇಹಿತ, ತಂದೆ ಶ್ರೀನಿವಾಸಯ್ಯ ಮಗನಿಗೆ ಯಾವುದೇ ನಿರ್ಬಂಧಗಳನ್ನು ವಿಧಿಸದೆ ಮಗನ ಇಚ್ಚೆಯನರಿತು ನಡೆಯುವವ. "ಎಳೆ ವಯಸ್ಸಿನಿಂದ ಅವರನ್ನರಿತ ನಾವು ವಾಸ್ತವೀಕತೆಗೆ ಪ್ರಾಮುಖ್ಯತ ಕೊಡಬೇಕೇ ಹೊತ್ತು ನಮ್ಮ ಕನಸುಗಳಿಲ್ಲ" ಹೀಗಾಗಿಯೇ ಮಗ ಡಾಕ್ಟರಾಗಲಿ ಎಂಬ ಸಣ್ಣ ಆಸೆ ಎಂದು ನಂಬಿರುವವನು.

ಇದ್ದರೂ, ಆ ಆಸೆಯನ್ನು ಮಗನ ಮೇಲೆ ಹೇರುವುದಿಲ್ಲ. ರವಿ ೯ನೇ ಬ್ಯಾಂಕ್ ಬಂದು ಅಂಧ ಮಕ್ಕಳಿಗೆ ಅನುಕೂಲವಾಗುವ Brill ಲಿಪಿಯನ್ನು ಅಧ್ಯಯನ ಮಾಡಲು ಉತ್ಸಾಹ ತೋರುತ್ತಾನೆ. ಅವನ ಉತ್ಸಾಹಕ್ಕೆ ಬೆಂಬಲವಾಗಿ ಶ್ರೀನಿವಾಸಯ್ಯ ನಿಂತಾಗ ರಾಮಪ್ಪ ಅಪಸ್ವರ ತೆಗೆಯುತ್ತಾನೆ. ಆ ಕೋರ್ಸ್ ಸ್ಕೋಪ್, ನ್ಯೂಚರ್ ಇಲ್ಲ. ಫ್ಯಾನ್ಸಿಯಾಗಿ ಥಿಂಕ್ ಮಾಡ್ತಿದ್ದಾನೆ ತಡೀಬೇಕು ಎಂದಾಗ ಅವನೇನೂ ಕಟ್ಟ ಹಾದಿ ಹಿಡಿದಿಲ್ಲ ಎಂದು ಮಗನನ್ನು ಸಮರ್ಥಿಸಿಕೊಳ್ಳುತ್ತಾನೆ. ವಿದ್ಯಾರ್ಥಿ ಸಮುದಾಯವನ್ನು ಪ್ರತಿನಿಧಿಸುವ ಮಾಧವಿ, ಸೌಜನ ರ ಮಾತುಕತೆಯಲ್ಲಿ " ಆ ಎಲ್.ಎನ್. ಆರ್.ಎಸ್. ಇವೆಲ್ಲಾ ಫಿಸಿಕ್ಸ್, ಕೆಮಿಸ್ಟ್ರಿ, ಮ್ಯಾಕ್ಸ್ ಅಷ್ಟೇ ಸಬೆಲ್ಟ್ ಅನ್ನೋ ಹಾಗೆ ಆಡ್ತಾರ", ನಿಮ್ಮ ಸೈನ್ಸ್ ಸಬ್ಕ್ಸ ಆಗಲ್ಲ ಹೋಗಿ ಆರ್ಟ್ಸ್ ನಲ್ಲಿ ಕೂತ್ ಕೊಳ್ಳಿ", ಎಂಬ ಅಂಶ ಶಿಕ್ಷಕರಲ್ಲಿ ಕೆಲವು ಶಿಕ್ಷಕರು ಕೂಡಾ ಸೈನ್ಸ್ ಶ್ರೇಷ್ಠ ಎಂಬ ಭ್ರಮೆಯಲ್ಲಿ ತೇಲುವವರಿದ್ದಾರೆ ಎಂಬುದು ಅರಿವಾಗುತ್ತದೆ. ಆಸಕ್ತಿಯಿಂದ ಓದುವ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಬೇಕೆ ವಿನಾಃ ಅವರ ನ್ಯೂನತೆಯನ್ನು ಎತ್ತಿ ಕೀಳರಿಮೆಗೆ ತಳ್ಳುವ ಕ್ರೌರ್ಯ ವನ್ನು ಯಾವ ಶಿಕ್ಷಕನು ಮಾಡಬಾರದು ಎಂಬುದನ್ನು ಸೂಕ್ಷ್ಮವಾಗಿ ನಾಟಕಕಾರ್ತಿ ಹೇಳಿದ್ದಾರೆ.

ಒಟ್ಟಾರೆಯಾಗಿ ಸೈನ್ಸ್ ಓದಿದವನು ಶ್ರೇಷ್ಠನೂ ಅಲ್ಲ ಕಲೆಯಲ್ಲಿ ಆಸಕ್ತಿ ಇರುವವನು ಕನಿಷ್ಟನೂ ಅಲ್ಲ. ಎಲ್ಲಾ ಪದವಿಗಳು ಸಮಾನ. ವಿದ್ಯಾರ್ಥಿ ಮುಕ್ತವಾಗಿ, ಸ್ವತಂತ್ರವಾಗಿ ಆಸಕ್ತಿಯಿಂದ ವಿದ್ಯೆಯನ್ನು ಕಲಿಯಬೇಕೆ ವಿನಾಃ ಹೆತ್ತವರ ಆಸೆ- ಆಕಾಂಕ್ಷೆಗಳನ್ನು ಈಡೇರಿಸುವ ಯಂತ್ರಗಳಲ್ಲ ಎಂಬ ವಾಸ್ತವವನ್ನು ಅನಾವರಣಗೊಳಿಸುತ್ತದೆ.

ರಾಮಪ್ಪ-ಶ್ರೀನಿವಾಸಯ್ಯ ಈ ಎರಡೂ ಮಾದರಿಗಳ ಮೂಲಕ ಸಮಾಜದ ಪೂರ್ವಾಗ್ರಹ ಪೀಡಿತ ಮನಸ್ಸಿಗೆ ಚಿಕಿತ್ಸೆ ನೀಡುವ ನಾಟಕಕಾರ್ತಿಯ ಪ್ರಯತ್ನ ಮೆಚ್ಚುವಂತದ್ದು. ಸಮಾಜದಲ್ಲಿ ರಾಮಪ್ಪನಂತವರು ಬದಲಾಗಿ ಶ್ರೀನಿವಾಸಯ್ಯನಂತೆ ಆಲೋಚಿಸಿದಾಗ ಮಾತ್ರ ನಮ್ಮ ಶೈಕ್ಷಣಿಕ ವ್ಯವಸ್ಥೆ ಮಕ್ಕಳ ಭವಿಷ್ಯ ಸರಿ ದಾರಿಲಿ ಸಾಗುತ್ತದೆ. ವಿದ್ಯೆ ಮಕ್ಕಳ ಬೌದ್ಧಿಕ, ವೈಚಾರಿಕ, ಮನೋವಿಕಾಸಗೊಳಿಸುವ ಅಂಶವೇ ವಿನಾಃ Prestige ಎತ್ತರಿಸುವ ವಾಹಕವಲ್ಲ. ಮಕ್ಕಳ ಮನದ ಮಾತನ್ನು ಪೋಷಕರು ಕೇಳಿಸಿಕೊಂಡಾಗ ಮಕ್ಕಳ ಬೆಳವಣಿಗೆಗೂ, ಸಮಾಜದ ಪ್ರಗತಿಗೂ ಅನುಕೂಲ ಎಂಬ ವಾಸ್ತವ ಸತ್ಯವನ್ನು `ವಾಸ್ತವೀಕತೆ' ನಾಟಕ ಬಿಚ್ಚಿಡುವ ಪ್ರಯತ್ನ ಮಾಡುತ್ತದೆ.

**ಆಕರ ಕೃತಿ**

1. ಗೀತಾ ರಾಮಾನುಜಂ.ಎಂಟು ನಾಟಕಗಳು,ಪುರೋಗಾಮಿ ಸಾಹಿತ್ಯ ಸಂಘ ೧೯೯೬.